ದಿನಾಂಕ :19-12-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ಎನ್.ವಕೀಲರಿಂದಃ-

ನನ್ನ ಊರು ನಿಂಗೆಕಟ್ಟೆ ಎಂದರೆ ಸರಿ. ದಾವಾ ಆಸ್ತಿ ಗೊತ್ತು. ಅದರ ಸರ್ವೆ ನಂ. 153. ಈ ಕೇಸನ್ನು ಕುಮಾರಯ್ಯ, ಶಿವಣ್ಣ, ದೊಡ್ಡರಂಗಯ್ಯನ ಮೇಲೆ ಹಾಕಿದ್ದಾರೆ. ದಾವೆ ಏಕೆ ಹಾಕಿದ್ದಾರೆ ಗೊತ್ತಿಲ್ಲ. ನನಗೆ ಸಿ.ಬಿ. ರಂಗಯ್ಯ ಗೊತ್ತಿಲ್ಲ. ಸೀಬನಯ್ಯನ ಅಪ್ಪ ಅಮ್ಮ ಗೊತ್ತಿಲ್ಲ. ಸೀಬನಯ್ಯನ ಸಹೋದರ ಸಹೋದರಿಯರು ಗೊತ್ತಿಲ್ಲ. ಸೀಬನಯ್ಯ ಯಾರನ್ನು ಮದುವೆ ಆದರು ಗೊತ್ತಿಲ್ಲ. ಸೀಬನಯ್ಯನಿಗೆ ಎಷ್ಟು ಮಕ್ಕಳು ನನಗೆ ಗೊತ್ತಿಲ್ಲ. ಸೀಬನಯ್ಯನ ಮನೆಯ ವ್ಯವಹಾರಗಳು ನನಗೆ ಗೊತ್ತಿಲ್ಲ. 1968 ರಲ್ಲಿ ಸೀಬನಯ್ಯನ ಮನೆಯಲ್ಲಿ ಪಾಲು ಪಟ್ಟಿ ಆದ ವಿಚಾರ ನನಗೆ ಗೊತ್ತಿಲ್ಲ. ಆ ಪಾಲು ಪಟ್ಟಿಯಲ್ಲಿ ಈ ದಾವಾ ಆಸ್ತಿಯನ್ನು ಗಂಗಮಾಳಮ್ಮನ ಮಕ್ಕಳಾದ ಗಂಗಯ್ಯ ಮತ್ತು ನಂಜಪ್ಪನಿಗೆ ಕೊಟ್ಟಿದ್ದು ನನಗೆ ಗೊತ್ತಿಲ್ಲ. ಆ ಪಾಲು ಪಟ್ಟಿಯಲ್ಲಿ ಸೀಬನಯ್ಯನ ಮಗ ನರಸಿಂಹಯ್ಯ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮನೆ ಇರುವುದು ಗೊತ್ತಿಲ್ಲ. ಅದರ ಜೊತೆಗೆ ಒಂದು ಶೆಡ್ ಮತ್ತು ಬೋರ್ ವೆಲ್ ಇರುವುದು ಗೊತ್ತಿಲ್ಲ. ಆ ಮನೆಯನ್ನು ದೊಡ್ಡರಂಗಯ್ಯ ಕಟ್ಟಿಸಿದ್ದಾನೆ ಮತ್ತು ಬೋರ್ ಹಾಕಿಸಿದ್ದಾರೆ ಎಂದರೆ ಗೊತ್ತಿಲ್ಲ. ಆ ಮನೆ ಕಟ್ಟಿದಾಗಿನಿಂದ ದೊಡ್ಡರಂಗಯ್ಯ ಮತ್ತು ಅವರ ಕುಟುಂಬವರು ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಪಾಲು ಪಟ್ಟಿ ಆದ ನಂತರ ಗಂಗಯ್ಯ ಮತ್ತು ನಂಜಪ್ಪ ನ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಗೊತ್ತಿಲ್ಲ. ಅವತ್ತಿನಿಂದ ಅವರೇ ಅದರ ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಗಂಗಯ್ಯ ತನ್ನ ಆಸ್ತಿಯಲ್ಲಿ

ಹಕ್ಕನ್ನು ಶಿವಣ್ಣನಿಗೆ ಬಿಟ್ಟು ಕೊಟ್ಟು ಹಕ್ಕು ಖಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದೊಡ್ಡರಂಗಯ್ಯ , ಶಿವಣ್ಣ ಮತ್ತು ದೊರೇಶ್ ದಾವಾ ಆಸ್ತಿಯಲ್ಲಿ ಅಡಿಕೆ ಸಸಿ ನೆಟ್ಟು ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ಆ ಅಡಿಕೆ ಸಸಿಗಳು ಫಸಲು ಕೊಡುತ್ತವೆ ಎಂದರೆ ಗೊತ್ತಿಲ್ಲ. ಆ ಅಡಿಕೆಗಳನ್ನು ದೊಡ್ಡರಂಗಯ್ಯ, ಶಿವಣ್ಣ ಮತ್ತು ದೊರೇಶ್ ಕಟಾವು ಮಾಡುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ರಾಗಿ ಉರುಳಿ ಬೆಳೆಯವುದಿಲಲ ಎಂದರೆ ಸರಿ. ದಾವಾ ಆಸ್ತಿ 1968 ರಿಂದ ಮೊದಲು ಗಂಗಯ್ಯ ಮತ್ತು ನಂಜಪ್ಪನ ಹೆಸರಿಗೆ ನಂತರ ಪ್ರತಿವಾದಿಯವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ಈ ದಾವಾ ಆಸ್ತಿಯಲ್ಲಿ ಯಾವತ್ತು ಕೂಡ ಸಿದ್ದಮ್ಮ, ಮೋಹನ್ ಕುಮಾರ್, ತಾರೇಗೌಡ ಸ್ವಾಧೀನದಲ್ಲಿಲ್ಲ ಎಂದರೆ ಗೊತ್ತಿಲ್ಲ. ನನಗೆ ಈ ದಾವಾ ಆಸ್ತಿ ವಿಚಾರವಾಗಲೀ, ಸೀಬನಯ್ಯನವರ ಕುಟುಂಬದವರ ವಿಚಾರವಾಗಲೀ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳ ಜೊತೆ ಶರಿಕ್ಕಾಗಿ ಸುಳ್ಳು ಪ್ರಮಾಣ ಸಲ್ಲಿಸಿದ್ದೇನೆ ಎಂದರೆ ಗೊತ್ತಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ನಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ